*ದಿನಾಂಕ: 26-08-2019 ರಂದು ಮಧ್ಯಾಹ್ನ 03.00 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ 16ನೇ ಆಡಳಿತ ಪರಿಷತ್ತಿನ ಸಭೆಯ ನಡವಳಿಗಳು.*

***

*ಹಾಜರಾತಿ:*

ಅನುಬಂಧ – 01 ರಲ್ಲಿ ನೀಡಲಾಗಿದೆ.

ಸಭೆಯ ಪ್ರಾರಂಭದಲ್ಲಿ ಯೋಜನಾ ನಿರ್ದೇಶಕರು ಸಭೆಗೆ ಹಾಜರಾಗಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಆಮಂತ್ರಿತರನ್ನು ಸ್ವಾಗತಿಸಿದರು. 16ನೇ ಆಡಳಿತ ಪರಿಷತ್ತಿನ ಸಭೆಯ ಅಜೆಂಡಾದಲ್ಲಿನ ವಿಷಯಗಳನ್ನು ಚರ್ಚಿಸಿ ಕೆಳಕಾಣಿಸಿದಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

*ವಿಷಯ 01: ಹಿಂದಿನ ಸಭೆಯ ನಡವಳಿಗಳನ್ನು ದೃಢೀಕರಿಸುವುದು ಮತ್ತು ಅವುಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ವಿವರಿಸುವುದು:*

15ನೇ ಆಡಳಿತ ಪರಿಷತ್ತಿನ ಸಭೆಯ ನಡವಳಿಗಳ ಎಲ್ಲಾ ನಿರ್ಣಯಗಳಿಗೆ ಈಗಾಗಲೇ ಕ್ರಮಕೈಗೊಂಡಿದ್ದು, ಅದರ ವಿವರಗಳನ್ನು ಯೋಜನಾ ನಿರ್ದೇಶಕರು ಸಭೆಗೆ ತಿಳಿಸಿದರು.

*ವಿಷಯ 02: 2009-10 ರಿಂದ 2019-20ನೇ ಜುಲೈ ಅಂತ್ಯದವರೆಗೆ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯಡಿ ಸಾಧಿಸಿದ ಪ್ರಗತಿ ವಿವರಿಸುವುದು:*

ಕೆಎಸ್‌ಎಸ್‌ಡಿಎ ಯಲ್ಲಿನ ಉಳಿಕೆ ಹಣವಾದ ರೂ.211/– ನ್ನು ಭಾರತ ಸರ್ಕಾರಕ್ಕೆ ಹಿಂದಿರುಗಿಸಲಾಗಿದೆ ಹಾಗೂ ಭಾರತ ಸರ್ಕಾರದ ಐಎಸ್‌ಎಸ್‌ಪಿ ಕಾರ್ಯಕ್ರಮವು ಮಾರ್ಚ್ 2019 ಕ್ಕೆ ಅಂತ್ಯಗೊಂಡಿದ್ದು, ಕಾರ್ಯಕ್ರಮದ ಪೂರ್ಣ ವರದಿಯನ್ನು ರಾಜ್ಯ ಸರ್ಕಾರದ ರಾಜ್ಯ ಉನ್ನತ ಮಟ್ಟದ ಚಾಲನಾ ಸಮಿತಿಯ ಅನುಮೋದನೆ ಪಡೆದು ಕೇಂದ್ರ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ.

*ವಿಷಯ 03: ಕೆಎಸ್‌ಎಸ್‌ಡಿಎ ಸಂಸ್ಥೆಯನ್ನು ಮುಚ್ಚುವ ಕುರಿತು.*

ರಾಜ್ಯ ಉನ್ನತ ಮಟ್ಟದ ಚಾಲನಾ ಸಮಿತಿಯ ಅನುಮೋದನೆಯಂತೆ ಕೆಎಸ್‌ಎಸ್‌ಡಿಎ ಯನ್ನು ಮುಚ್ಚಿ ಸಾಂಖ್ಯಿಕ ಕೋಶವನ್ನು ಪ್ರಾರಂಭ ಮಾಡಲು ಸಭೆಯು ಅನುಮೋದಿಸಿತು ಹಾಗೂ ಈ ಪ್ರಕ್ರಿಯೆಯನ್ನು ತ್ವರಿತವಾಗಿ ಕೈಗೊಳ್ಳಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿರ್ದೇಶಕರಿಗೆ ಸೂಚಿಸಲಾಯಿತು. ಮುಂದುವರೆಯುತ್ತಾ ಕೆಎಸ್‌ಎಸ್‌ಡಿಎ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಡೇಟಾ ಎಂಟ್ರಿ ಆಪರೇಟರ್‌ಗಳು ಹಾಗೂ ಮೂರು ಜನ ಗ್ರೂಪ್–ಡಿ ನೌಕರರನ್ನು ಸಾಂಖ್ಯಿಕ ಕೋಶದಲ್ಲಿ ಮುಂದುವರೆಸಲು ಯೋಜನಾ ನಿರ್ದೇಶಕರು ಸಭೆಯನ್ನು ಕೋರಲಾಗಿ ಸಭೆಯು ಈ ಪ್ರಸ್ತಾವನೆಗೆ ಅನುಮೋದನೆ ನೀಡಿತು.

*ವಿಷಯ 04: ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.*

1. Worksoft ತಂತ್ರಾಂಶ ನಿರ್ವಹಣೆಗಾಗಿ NICSI, New Delhi ಗೆ ದಿನಾಂಕ: 12.09.2017 ರಲ್ಲಿ ಬಿಡುಗಡೆಗೊಂಡಿದ್ದ ರೂ.1,05,986/– ಗಳಲ್ಲಿ ಉಳಿಕೆಗೊಂಡಿದ್ದ ರೂ.20,349/– ಮೊತ್ತವನ್ನು 2019-20 ನೇ ಸಾಲಿನಲ್ಲಿ Worksoft ತಂತ್ರಾಂಶ ನಿರ್ವಹಣೆಗಾಗಿ ಬಿಡುಗಡೆ

ಮಾಡಲಾದ ರೂ.7,20,808/- ಗಳಿಗೆ ಸೇರಿಸಿಕೊಳ್ಳಲಾಗುವುದೆಂದು ಎನ್ಐಸಿ ವತಿಯಿಂದ ಮಾಹಿತಿ ಬಂದಿದ್ದು ಅದರಂತೆ ಕ್ರಮಕೈಗೊಳ್ಳಲು ಯೋಜನಾ ನಿರ್ದೇಶಕರು ಸಭೆಯನ್ನು ಕೋರಲಾಗಿ ಸಭೆಯು ಈ ಪ್ರಸ್ತಾವನೆಗೆ ಅನುಮೋದನೆ ನೀಡಿತು.

2. ರಾಯಚೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಕಾರ್ಯವು ಪೂರ್ಣಗೊಂಡಿದ್ದು, ಸದರಿ ಕಟ್ಟಡವನ್ನು ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ರವರಿಗೆ ದಿನಾಂಕ: 09.07.2019 ರಂದು ಹಸ್ತಾಂತರಿಸಲಾಗಿದೆ ಹಾಗೂ ಕೆಆರ್ಐಡಿಎಲ್, ರಾಯಚೂರು ರವರಿಗೆ ಅಂತಿಮ ಕಂತಿನ ರೂ.23.75 ಲಕ್ಷ ಅನುದಾನವನ್ನು ಕೆಎಸ್ಎಸ್ಡಿಎ ಖಾತೆಗೆ ಜಮೆಯಾಗಿರುವ ಬಡ್ಡಿ ಹಣದಿಂದ ಬಿಡುಗಡೆ ಮಾಡುವುದಾಗಿ ಯೋಜನಾ ನಿರ್ದೇಶಕರು ಸಭೆಗೆ ತಿಳಿಸಿದರು. ಇದಕ್ಕೆ ಸಭೆಯು ಅನುಮೋದಿಸಿತು.

3. **GIS mapping for state at a glance** ಗೆ ಸಂಬಂಧಿಸಿದಂತೆ, ಜಿಲ್ಲಾ ಅಂಕಿ ಅಂಶಗಳ ನೋಟ ಮತ್ತು ಕರ್ನಾಟಕ ಅಂಕಿ ಅಂಶಗಳ ನೋಟ(DAG-KAG) ಯನ್ನು ಈ ವರ್ಷದಿಂದ ತಂತ್ರಾಂಶದ ಮುಖಾಂತರ ಗಣಕೀಕರಿಸಿ ಸಾದರಪಡಿಸಬೇಕೆಂದು ಉದ್ದೇಶಿಸಲಾಗಿತ್ತು. ಅದರಂತೆ, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ(KSRSAC) ದವರು ಈ ಕಾರ್ಯಕ್ರಮಕ್ಕೆ ಸೂಕ್ತವಾದ ತಂತ್ರಾಂಶವನ್ನು ಅಭಿವೃದ್ಧಿಪಡಿಸಿರುತ್ತಾರೆ ಹಾಗೂ ಎಲ್ಲಾ ಜಿಲ್ಲೆಗಳ ಡೇಟಾ ಎಂಟ್ರಿ ಕಾರ್ಯಕ್ರಮವು ಮುಗಿದಿದ್ದು, ವರದಿಗಳು ಸಹಾ ಲಭ್ಯವಿರುತ್ತವೆ. ಈ ತಂತ್ರಾಂಶದ ವಿಶೇಷತೆಯೆಂದರೆ DAG-KAG ನಲ್ಲಿ ಲಭ್ಯವಿರುವ ಮಾಹಿತಿ ಆಧರಿಸಿ ಡೇಟಾವನ್ನು Spatial ಆಗಿ ನೋಡಬಹುದಾಗಿರುತ್ತದೆ. ಹಾಲಿ ಈ ಮಾಹಿತಿಯನ್ನು kgis.ksrsac.in/kag ನಲ್ಲಿ ನೋಡಬಹುದಾಗಿರುತ್ತದೆ(USER ID: secretary, PASSWORD:kSrsac@123)

ಇನ್ನಾವುದೇ ವಿಷಯಗಳು ಚರ್ಚೆಗೆ ಇಲ್ಲದ ಕಾರಣ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ. ಶಾಲಿನಿ ರಜನೀಶ್)
ಅಧ್ಯಕ್ಷರು, ಕೆ.ಎಸ್.ಎಸ್.ಡಿ.ಎ ಆಡಳಿತ ಪರಿಷತ್ತು
ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಸಂಖ್ಯೆ: ಆಸಾಂನಿ 40 ಕೆಎಸ್ಎಸ್ಡಿಎ 2019 ದಿನಾಂಕ: 04-09-2019

ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ

ಅನುಬಂಧ – 1

ದಿನಾಂಕ 26.08.2019 ರಂದು ಮಧ್ಯಾಹ್ನ 03.00 ಘಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(**KSSDA**)ಯ 16ನೇ ಆಡಳಿತ ಪರಿಷತ್ತಿನ (**Governing Council**) ಸಭೆಯಲ್ಲಿ ಹಾಜರಿದ್ದ ಸದಸ್ಯರ ವಿವರ.

| | | |
|---|---|---|
| 1. | **ಡಾ. ಶಾಲಿನಿ ರಜನೀಶ್, ಭಾ.ಆ.ಸೇ**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ | ಅಧ್ಯಕ್ಷರು |
| 2. | **ಶ್ರೀ ರಾಜಕುಮಾರ್ ಖತ್ರಿ,**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,<br>ಕಂದಾಯ ಇಲಾಖೆ ರವರ ಪರವಾಗಿ. | ಸದಸ್ಯರು |
| 3. | **ಶ್ರೀಮತಿ ಭಾಗ್ಯಲಕ್ಷ್ಮಿ, ಹೆಚ್.ಎಸ್. ಸರ್ಕಾರದ ಉಪ ಕಾರ್ಯದರ್ಶಿ,**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಪರಿಸರ, ಜೀವಿಶಾಸ್ತ್ರ ಮತ್ತು ಅರಣ್ಯ ಇಲಾಖೆ ರವರ ಪರವಾಗಿ. | ಸದಸ್ಯರು |
| 4. | **ಶ್ರೀ ಕೆ.ಬಿ ಪ್ರಕಾಶ್, ಸರ್ಕಾರದ ಉಪ ಕಾರ್ಯದರ್ಶಿ,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ ಪರವಾಗಿ. | ಸದಸ್ಯರು |
| 5. | **ಶ್ರೀ ಮನೋಜ್ ರಾಜನ್, ವಿಶೇಷ ಕಾರ್ಯದರ್ಶಿಗಳು**<br>ಸರ್ಕಾರದ ಕಾರ್ಯದರ್ಶಿಗಳು,<br>ಕೃಷಿ ಇಲಾಖೆ ರವರ ಪರವಾಗಿ. | ಸದಸ್ಯರು |
| 6. | **ಶ್ರೀ ಪುರುಷೋತ್ತಮ್ ಸಿಂಗ್, ವಿಶೇಷ ಅಧಿಕಾರಿ(ಜಿ.ಪ)**<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ (ಆಯವ್ಯಯ ಮತ್ತು ಸಂಪನ್ಮೂಲ)ರವರ ಪರವಾಗಿ | ಸದಸ್ಯರು |
| 7. | **ಶ್ರೀ ನಾಥನ್, ಎಸ್.ಆರ್.ಎಸ್, ವಿಶೇಷಾಧಿಕಾರಿಗಳು,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಮಾಧ್ಯಮಿಕ)ರವರ ಪರವಾಗಿ | ಸದಸ್ಯರು |
| 8. | **ಶ್ರೀ ರಾಮಕೃಷ್ಣ, ನಿರ್ದೇಶಕರು, ಪಿ.ಎಂ.ಐ,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರವರ ಪರವಾಗಿ | ಸದಸ್ಯರು |
| 9. | **ಶ್ರೀ ಕೆ.ಎಸ್. ಶಂಕರ್**<br>ಯೋಜನಾ ನಿರ್ದೇಶಕರು,<br>ಕೆಎಸ್ಎಸ್‌ಡಿಎ | ಸದಸ್ಯರು |
| 10. | **ಶ್ರೀಮತಿ ಎಸ್.ಪ್ರಮೀಳಾ, ಜಂಟಿ ನಿರ್ದೇಶಕರು, ಜನಸಂಖ್ಯಾ ತಜ್ಞರು,**<br>ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪರವಾಗಿ | ಸದಸ್ಯರು |
| 11. | ಶ್ರೀ ಟಿ.ಡಿ.ಬ್ರಹ್ಮಪ್ರಕಾಶ್, ಉಪ ನಿರ್ದೇಶಕರು(ಸಾಂಖ್ಯಿಕ),<br>ಸರ್ಕಾರದ ಕಾರ್ಯದರ್ಶಿಗಳು,<br>ತೋಟಗಾರಿಕೆ ಇಲಾಖೆ ರವರ ಪರವಾಗಿ. | ಸದಸ್ಯರು |
| 12. | **ಶ್ರೀ ರೂಪದೇವಿ, ಡಿ. (ಯೋಜನೆ),**<br>ಸರ್ಕಾರದ ಕಾರ್ಯದರ್ಶಿಗಳು,<br>ಕೃಷಿ ಇಲಾಖೆ ರವರ ಪರವಾಗಿ. | ಸದಸ್ಯರು |

ಹಾಜರಾದ ಆಮಂತ್ರಿತರ ಪಟ್ಟಿ.

| | | |
|---|---|---|
| 1. | **ಶ್ರೀ. ಕೆ ನಾರಾಯಣ,**<br>ಜನನ ಮರಣಗಳ ಮುಖ್ಯ ನೋಂದಣಾಧಿಕಾರಿಗಳು ಹಾಗೂ ಅಪರ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | ಆಮಂತ್ರಿತರು |
| 2. | **ಶ್ರೀ ಎಂ.ಡಿ. ಶ್ರೀನಿವಾಸ್, ಸಹಾಯಕ ನಿರ್ದೇಶಕರು,**<br>ಜಂಟಿ ನಿರ್ದೇಶಕರು<br>ಸಿ.ಐ.ಎಸ್ ವಿಭಾಗ,<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ರವರ ಪರವಾಗಿ | – |
| 3. | **ಶ್ರೀ ಬಾಲರಾಜು,**<br>ಜಂಟಿ ನಿರ್ದೇಶಕರು<br>ಎಸ್.ಐ.ಪಿ. ವಿಭಾಗ,<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | – |
| 4. | **ಶ್ರೀ ಯು. ಆರ್. ಸುಬ್ರಮಣ್ಯ,**<br>ಜಂಟಿ ನಿರ್ದೇಶಕರು,<br>ಆಡಳಿತ ವಿಭಾಗ<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | – |
| 5. | **ಶ್ರೀ ಯು. ಆರ್. ಸುಬ್ರಮಣ್ಯ,**<br>ಜಂಟಿ ನಿರ್ದೇಶಕರು (ಪ್ರ),<br>ಸಿ.ಎನ್.ಎಲ್. ವಿಭಾಗ<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | – |
| 6. | **ಶ್ರೀ ಎ.ಆರ್. ಶ್ರೀಧರ್, ಸಹಾಯಕ ನಿರ್ದೇಶಕರು,**<br>ಜಂಟಿ ನಿರ್ದೇಶಕರು,<br>ಎ.ಆರ್.ಸಿ. ವಿಭಾಗ,<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ರವರ ಪರವಾಗಿ | – |
| 7. | **ಶ್ರೀ ಗೋಕುಲ್ ಪ್ರಸಾದ್,**<br>ಜಂಟಿ ನಿರ್ದೇಶಕರು,<br>ಎ.ಜಿ.ಎಸ್. ವಿಭಾಗ,<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | – |
| 8. | **ಶ್ರೀಮತಿ ಬಿ.ಎಸ್.ಪುಷ್ಪ**<br>ಉಪ ನಿರ್ದೇಶಕರು,<br>ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ (ಕೆಎಸ್ಎಸ್‌ಡಿಎ) | – |
| 9. | **ಶ್ರೀ ಕೆ.ನರಸಿಂಹ ಫಣಿ,**<br>ಉಪ ನಿರ್ದೇಶಕರು<br>ಎಸ್.ಐ.ಪಿ. ವಿಭಾಗ,<br>ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | – |